

ಕೂಡಿಕೆಗಳನ್ನು ನಿಷ್ಠುರವಾಗಿ ತ್ಯಜಿಸುವುದರಿಂದಲೇ ಶಂಕರಭಟ್ಟರು ರೂಪಿಸುತ್ತಿರುವ 'ಎಲ್ಲರ ಕನ್ನಡ'ಕ್ಕೆ ಕ್ರಾಂತಿಕಾರಕ ತೀವ್ರತೆ ಒದಗಿದೆ. ಅದರೊಳಗಿನ ಆಶಯ, ಕಾಳಜಿ ಮತ್ತು ಪ್ರಯೋಗಶೀಲತೆಗಳು ಆದರ ಹುಟ್ಟಿಸುತ್ತವೆ. ಆದರೆ ಅದರ ಉಪಯುಕ್ತತೆಯಿನ್ನೂ ಸಾಬೀತಾಗಬೇಕಿದೆ. ಸಹಜವಾಗಿ ಓದುವುದೂ ಕಷ್ಟವಾಗುವಂತೆ ತದ್ಭವಗಳಿಂದ ಕೂಡಿದ ಪೆಡಸುಗನ್ನಡವನ್ನು ರಚಿಸಿಕೊಂಡ ಆಂಡಯ್ಯನ ವಿಫಲತೆ ನಮ್ಮ ಎದುರಿಗಿದೆ.

## ಪ್ರತಿನಿಧೀಕರಣದ ಪರಿ

ಕನ್ನಡದೊಳಗಿರುವ ಕನ್ನಡಂಗಳನ್ನು ಮಂಗಳೂರು, ಮೈಸೂರು, ಧಾರವಾಡ, ಗುಲಬರ್ಗ ಕನ್ನಡವೆಂದು ತರಗತಿಗಳಲ್ಲಿ ಕಲಿಸುವ ವ್ಯವಸ್ಥೆ ಶಿಕ್ಷಣದಲ್ಲಿದೆ. ಆಡಳಿತದ ಅನುಕೂಲಕ್ಕಾಗಿ ಮಾಡಿಕೊಂಡ ಭೌಗೋಳಿಕ ವಿಭಜನೆಯ ಚೌಕಟ್ಟಿನಲ್ಲಿರುವ ಇದು, ಭಾಷಿಕವಾಗಿ ಸಾಂಸ್ಕೃತಿಕವಾಗಿ ಸಾಹಿತ್ಯವಾಗಿ ಅಸೂಕ್ಷ್ಮ ಮತ್ತು ಅವಾಸ್ತವಿಕ. ತುಳುಗಂಧಿಯಾದ ಮಂಗಳೂರು ಕನ್ನಡಕ್ಕಿಂತ, ಹಳಗನ್ನಡದ ಪದಗಳನ್ನು ಬಹಳಷ್ಟು ಉಳಿಸಿಕೊಂಡಿರುವ ಕುಂದಾಪುರ ಕನ್ನಡ ಬೇರೆ; ಬೆಳಗಾವಿಯ ಕನ್ನಡವು ಧಾರವಾಡ–ಹಾವೇರಿಗಿಂತ ಭಿನ್ನ; ರಾಯಚೂರು, ಕಲಬುರ್ಗಿ, ಬೀದರ್ ಕನ್ನಡಗಳದ್ದು ಪ್ರತ್ಯೇಕ ಜಗತ್ತುಗಳು. ಮೈಸೂರಗನ್ನಡದಲ್ಲಿ ಚನ್ನರಾಯಪಟ್ಟಣದ ರಾಗವಾಗಿ ಎಳೆದುಮಾತಾಡುವ ಕನ್ನಡಕ್ಕೆ ಹೋಲಿಸಿದರೆ ಚಾಮರಾಜನಗರದ ಕನ್ನಡದ ಕಾಕುಗಳೇ ದುಸರಾ. ಇಲ್ಲೇ ಹಳೇಮೈಸೂರಿನ ಶಿಷ್ಟ ಕನ್ನಡವು, ಚಾರಿತ್ರಿಕ ಮತ್ತು ರಾಜಕೀಯ ಕಾರಣದಿಂದ ಅಧಿಕಾರಸ್ಥ ಕೇಂದ್ರವಾಗಿ, ಉಳಿದ ಕನ್ನಡಂಗಳನ್ನು ಹೇಗೆ ನಡೆಸಿಕೊಂಡಿತು ಎಂಬ ಪ್ರಶ್ನೆಯನ್ನು ಕೇಳಿಕೊಳ್ಳಬೇಕು. ಇದರ ಉತ್ತರವು ಕಹಿಯಾಗಿದೆ. ಅಧಿಕಾರ ಕೇಂದ್ರಗಳು ಮಾಡುವ ಭಾಷಿಕ ಶ್ರೇಣೀಕರಣವು ಶ್ರೇಷ್ಠತೆ, ಕೀಳರಿಮೆ, ದ್ವೇಷಗಳಿಗೆ ಕಾರಣವಾಗುತ್ತ ಬಂದಿದೆ.

ಆದರೆ ಪ್ರಭುತ್ವವು ರಾಜಕೀಯ ಒತ್ತಡಗಳಿಗೆ ಮಣಿದು, ಕೆಲವೊಮ್ಮೆ ಜನಭಾಷೆಗಳಿಗೂ ಅವುಗಳ ಒಳಚಹರೆಗಳಿಗೂ ಮನ್ನಣೆ ಕೊಡುವುದುಂಟು. ಸುಳ್ಯ ಪರಿಸರದಲ್ಲಿರುವ ಅರೆಭಾಷೆಯು ಅಕಾಡೆಮಿಯನ್ನು ಪಡೆದಿದ್ದು ಇದಕ್ಕೆ ಸಾಕ್ಷಿ. ಈ ಭಾಗ್ಯವು ಕುಂದಾಪುರ, ಚಾಮರಾಜನಗರ, ಬೀದರಗನ್ನಡಗಳಿಗೆ ಸಿಗಲಿಲ್ಲ. ಆದರೆ ಪ್ರಭುತ್ವವು ಕೊಡಲಾಗದ ಮನ್ನಣೆಯನ್ನು ಒಳಗನ್ನಡದ ಬಹುರೂಪೀ ಚಹರೆಗಳನ್ನು ದಾಖಲಿಸುವ ನಿಘಂಟುಗಳು ದೊರಕಿಸಿಕೊಟ್ಟವು. ಕುಂದಾಪುರ ಹವ್ಯಕ, ಬೀದರಗನ್ನಡದ